## ಬುತ್ತಿ ಚಿಗುರು



### ಹಗ್ಗಕ್ಕಾಗಿ...

ಖೈದಿ ಒಬ್ಬನನ್ನು ಸೆಂಟ್ರಲ್ ಜೈಲಿಗೆ ವರ್ಗಾಯಿಸಲಾಗಿತ್ತು. ಅವನ ಮಾಹಿತಿ ಸಂಗ್ರಹಿಸುವಾಗ ಅಲ್ಲಿನ ಜೈಲರ್ ಕೇಳಿದ, 'ಯಾವ ಅಪರಾಧಕ್ಕಾಗಿ ನಿನ್ನನ್ನು ಶಿಕ್ಷಿಸಲಾಗಿದೆ?' ಎಂದು. 'ಹಗ್ಗವನ್ನು ಕದ್ದಿದ್ದಕ್ಕಾಗಿ' ಎಂದ ಖೈದಿ. 'ಕೇವಲ ಒಂದು ಹಗ್ಗ ಕದ್ದಿದ್ದಕ್ಕೆ ಈ ಶಿಕ್ಷೆ ಕೊಟ್ಟಿರಲು ಸಾಧ್ಯವಿಲ್ಲವಲ್ಲ' ಎಂದಾಗ ಖೈದಿ ಹೇಳಿದ, 'ಹೌದು ಸರ್, ನಾನು ಹಗ್ಗವನ್ನಷ್ಟೇ ಕದ್ದಿದ್ದು. ಆದರೆ ನನ್ನ ಗ್ರಹಚಾರಕ್ಕೆ ಹಗ್ಗದ ಮತ್ತೊಂದು ತುದಿಗೆ ದಿನವೂ 10 ಲೀಟರ್ ಹಾಲು ಕೊಡುವ ಎಮ್ಮೆ ಇತ್ತು'.

**ಪ.ನಾ. ಹಳ್ಳಿ ಹರೀಶ್ ಕುಮಾರ್**

---

### ರೌಂಡ್ಸ್‌ಗೆ ಹೋಗಿದಾರೆ

ಅಂಬುಜಮ್ಮ ಪಂಕಜಮ್ಮನ ಮನೆಗೆ ಬಂದರು. ಆಚೀಚೆ ನೋಡಿದರೆ ರಾಯರು ಕಾಣಲಿಲ್ಲ... ಕೇಳಿದರು, 'ಪಂಕಜಮ್ಮ, ಎಲ್ಲಿ ನಿಮ್ಮ ಯಜಮಾನರು? ಕಾಣ್ತಾ ಇಲ್ಲವಲ್ಲ!' 'ಅವರು ರೌಂಡ್ಸ್‌ಗೆ ಹೋಗಿದಾರೆ ಕಣ್ರೀ' ಎಂದರು ಪಂಕಜಮ್ಮ. 'ರೌಂಡ್ಸ್‌ಗಾ? ಅವರೇನು ಡಾಕ್ಟರ್ ಅಲ್ಲವಲ್ಲ!' ಅಚ್ಚರಿಯಾಯಿತು ಅಂಬುಜಮ್ಮಗೆ. 'ಅಲ್ಲ, ಅವರು ಪೊಲಿಟಿಕಲ್ ರೌಂಡ್ಸ್‌ಗೆ ಹೋಗಿದ್ದಾರೆ' ಎಂದಾಗ ಮತ್ತಷ್ಟು ಅಚ್ಚರಿಯಿಂದ ಕೇಳಿದರು, 'ಅದೆಂಥ ರೌಂಡ್ಸ್ ರೀ?' ಎಂದು. 'ಅದೇ ರೀ, ಈಗೀಗ ಎಲ್ಲಾ ಪಕ್ಷಗಳಲ್ಲೂ ನಡೀತಿದೆಯಲ್ಲ, ಮೊದಲು ಆ ಪಕ್ಷದಲ್ಲಿ ಇದ್ದರಾ... ಆಮೇಲೆ ಈ ಪಕ್ಷಕ್ಕೆ ಬಂದರಾ... ಈಗ ಇನ್ನೊಂದು ಪಕ್ಷಕ್ಕೆ ಹೋಗೋಕೆ ಪ್ಲಾನ್ ಮಾಡೋಕಂತ ಹೋಗಿದಾರೆ... ಇದೂ ರೌಂಡ್ಸ್ ತಾನೆ?!' ಎಂದಾಗ ಅಂಬುಜಮ್ಮ ಅವಾಕ್ಕಾದರು.



**ರೇಖಾ ಹಾಲಾಡಿ**